# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | **940** |
| 2 | ಸದಸ್ಯರ ಹೆಸರು | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| 3 | ಉತ್ತರಿಸಬೇಕಾದ ದಿನಾಂಕ | 21.09.2022 |
| 4 | ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸ್ವಾಭಿಮಾನಿ ಆ್ಯಪ್‌ನಲ್ಲಿ ರೈತರಿಗೆ ಆಗಲಿರುವ ತೊಂದರೆ ಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿರುವುದಿಲ್ಲ |
| ಆ) | ಕುಟುಂಬದಲ್ಲಿನ ಅಕ್ಷರಸ್ಥರು ಅವರ ಮನಸೋಇಚ್ಛೆ ಜಮೀನನ್ನು ಅಳತೆ ಮಾಡಿ, ಸರ್ವೆ ಇಲಾಖೆಗೆ ಅಪ್ಲೋಡ್ ಮಾಡಿದ್ದಲ್ಲಿ ಅನಕ್ಷರಸ್ಥರಾದ ಇತರೆ ಸದಸ್ಯರಿಗೆ ಅದರ ಅರಿವಿಲ್ಲದೆ ಆಗುವ ಅನಾಹುತ ಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸ್ವಾವಲಂಬಿ ಯೋಜನೆಯು ಸುರಕ್ಷಿತ ರೀತಿಯಲ್ಲಿ ಈ ಕೆಳಕಂಡಂತೆ ಕೆಲಸ ನಿರ್ವಹಿಸುತ್ತದೆ<br>1. ಕೇವಲ ಖಾಸಗಿ ಆರ್.ಟಿ.ಸಿ.ದಾರರು ಮಾತ್ರ ಆಧಾರ್ ಮೂಲಕ ತನ್ನ ಗುರುತನ್ನು ದೃಢೀಕರಿಸುವ ಮೂಲಕ ಅರ್ಜಿ ಸಲ್ಲಿಸಬಹುದಾಗಿರುತ್ತದೆ.<br>2. ಅರ್ಜಿ ಸಲ್ಲಿಸಿದ ನಂತರ ಇಲಾಖೆಯು ಸ್ವೀಕೃತವಾದ ಅರ್ಜಿಗಳಿಗೆ ಸಂಬಂಧಿಸಿದ ಸರ್ವೆ ನಂಬರಿನ ಹಾಲಿ ಇಲಾಖೆಯಲ್ಲಿ ಚಾಲ್ತಿಯಲ್ಲಿರುವ ಸರ್ವೆ ದಾಖಲೆಗಳನ್ನು ತಂತ್ರಾಂಶದ ಮೂಲಕ ಅರ್ಜಿದಾರರಿಗೆ ಒದಗಿಸಲಾಗುತ್ತಿದೆ.<br>3. ಬಹುಮಾಲೀಕತ್ವ ಪಹಣಿಗಳಲ್ಲಿ ಎಲ್ಲಾ ಹಕ್ಕುದಾರರ ಆಧಾರ್ ಗುರುತಿನ ದೃಢೀಕರಣವು ಕಡ್ಡಾಯವಾಗಿರುತ್ತದೆ.<br>4. ಅರ್ಜಿದಾರರು ಎಲ್ಲಾ ಹಕ್ಕುದಾರರ ಸಹಿಯೊಂದಿಗೆ ಸರ್ವೆ ಇಲಾಖೆಯು ಒದಗಿಸಿರುವ ನಕ್ಷೆಯಲ್ಲಿ ಅಗತ್ಯ ವಿಭಜನೆಯನ್ನು ಗುರುತಿಸಿ ನಕ್ಷೆಯನ್ನು ಅಪ್ಲೋಡ್ ಮಾಡಬೇಕಾಗಿರುತ್ತದೆ.<br>5. ಇಲಾಖೆಯು ಅರ್ಜಿದಾರರು ಅಪ್ಲೋಡ್ ಮಾಡಿರುವ ನಕ್ಷೆಯನ್ನು ಪರಿಶೀಲಿಸಿ ಸರಿಯಾಗಿದ್ದಲ್ಲಿ ಮಾತ್ರ ಅನುಮೋದಿಸಲಾಗುವುದು.<br>ಆದ್ದರಿಂದ ನಾಗರೀಕರು 11(ಇ)/ ಪೋಡಿ/ ಅಲಿನೇಷನ್ ಪೂರ್ವ ನಕ್ಷೆಯನ್ನು ಸರ್ವೆ ಇಲಾಖೆಯು ಒದಗಿಸಿರುವ ನಕ್ಷೆಯಲ್ಲಿ ಮಾತ್ರ ಅಪ್ಲೋಡ್ ಮಾಡಲು ಅಧಿಕಾರ ನೀಡಲಾಗಿರುತ್ತದೆ. |
| ಇ) | ಹಾಗಾದಲ್ಲಿ ಇದನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; (ವಿವರ ನೀಡುವುದು) | |
| ಈ) | ಇತ್ತೀಚೆಗೆ ಹೊಸದಾಗಿ ನಗರಮಾಪನ ಯೋಜನೆಯಲ್ಲಿನ (ಯುಪಿಓಆರ್) ದ್ರೋಣ್ ಸರ್ವೆ ರೂಪುರೇಷೆಗಳು ಹಾಗೂ ಅನುಷ್ಠಾನದ ವಿಧಾನಗಳನ್ನು ತಿಳಿಸುವುದು. | ನಗರ ಮಾಪನ ಯೋಜನೆಯನ್ನು (**ಯು.ಪಿ.ಓ.ಆರ್**), ಅತ್ಯಾಧುನಿಕ ತಂತ್ರಜ್ಞಾನವಾದ ಡ್ರೋಣ್ ಬಳಸಿ ಸರ್ವೆ ಆಫ್ ಇಂಡಿಯಾ ಸಂಸ್ಥೆಯ ಸಹಯೋಗದೊಂದಿಗೆ ಬೆಂಗಳೂರು ನಗರದ ಎಲ್ಲಾ ವಾರ್ಡ್‌ಗಳಲ್ಲಿ ಜಾರಿಗೊಳಿಸಿದ್ದು ಕಾರ್ಯ ಪ್ರಗತಿಯಲ್ಲಿರುತ್ತದೆ. ಸದರಿ ಡ್ರೋಣ್ ಆಧಾರಿತ ಯು.ಪಿ.ಓ.ಆರ್/ನಗರ ಮಾಪನ ಕಾರ್ಯವನ್ನು ಈ |

| | | |
|---|---|---|
| | | ಕೆಳಕಂಡಂತೆ ನಿರ್ವಹಿಸಲಾಗುತ್ತಿದೆ.<br>1) ಸರ್ಕಾರದ ಆದೇಶ ಸಂಖ್ಯೆ: ಕಂಇ 158 ಭೂದಾಸ 2018, ದಿನಾಂಕ: 07-11-2018 ರಂತೆ ಭಾರತೀಯ ಸರ್ವೇಕ್ಷಣಾ ಸಂಸ್ಥೆಯವರಿಂದ ಅಥವಾ ಇತರೆ ಸಂಸ್ಥೆಗಳಿಂದ ಡ್ರೋಣ್ ಸರ್ವೆ ಕಾರ್ಯ ಮಾಡಿಸಿ ನಕ್ಷೆಗಳನ್ನು ಪಡೆಯಲಾಗುತ್ತಿದೆ.<br>2) ಭೂಕಂದಾಯ ಅಧಿನಿಯಮ 1964 ಕಲಂ 106, 112, 148, 152 ಮತ್ತು 153 ರಂತೆ ಹಾಗೂ ಭೂಕಂದಾಯ ನಿಯಮ 1966 ರ ನಿಯಮ 82 ರಿಂದ 93 ರಂತೆ ಯು.ಪಿ.ಓ.ಆರ್/ ನಗರ ಮಾಪನ ಕಾರ್ಯ ನಿರ್ವಹಿಸಲಾಗುತ್ತಿರುತ್ತದೆ.<br>ಮೇಲ್ಕಂಡ ಅಧಿನಿಯಮ ಹಾಗೂ ನಿಯಮದಲ್ಲಿ ಸೂಚಿಸಿರುವಂತೆ ಯು.ಪಿ.ಓ.ಆರ್ / ನಗರ ಮಾಪನ ಸರ್ವೆ ಕಾರ್ಯ ನಿರ್ವಹಿಸಲಾಗುತ್ತಿದೆ. |
| ಊ) | ಸದರಿ ಡ್ರೋಣ್ ಸರ್ವೆಯಲ್ಲಿ ಮನೆ / ನಿವೇಶನದ ಮುಂಭಾಗ ಮಾತ್ರ ಭೌತಿಕವಾಗಿ ಭೂಮಾಪಕರು ಸರ್ವೆ ಮಾಡಲು ತಿಳಿಸಲಾಗಿದ್ದು, ಉಳಿದ ಮೂರು ಕಡೆ ಅಳತೆಗಳನ್ನು ಭೂಮಾಪಕರಿಂದ ತೆಗೆದುಕೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಡ್ರೋಣ್ ಆಧಾರಿತ ನಕ್ಷೆಯು 10cm ನಷ್ಟು ನಿಖರತೆ ಹೊಂದಿರುತ್ತದೆ ಹಾಗೂ ಇಲಾಖಾ ಭೂಮಾಪಕರಿಂದ ಅಡವಿ ಕೆಲಸ ನಿರ್ವಹಿಸುತ್ತಿರುವುದು ನೋಟಿಸ್ ಜಾರಿ ಮಾಡಿ, ದಾಖಲೆ ಸಂಗ್ರಹಿಸಲು, ಹೆಚ್ಚು ನಿಖರತೆಗಾಗಿ ಮಾಹಿತಿ ಸಂಗ್ರಹಿಸಲು ಹಾಗೂ ದಾಖಲೆಗಳನ್ನು ಪಡೆಯುವ ಉದ್ದೇಶವಾಗಿರುತ್ತದೆ.<br>ಈ ವೇಳೆ ಖಾಲಿ ನಿವೇಶನಗಳ ಎಲ್ಲಾ ಭಾಗಗಳಲ್ಲಿ (ಬಾಹುಗಳ) ಅಳತೆಯನ್ನು ಪಡೆಯಲಾಗುತ್ತಿದೆ. ಆದರೆ ನಿರ್ಮಾಣ ಆಗಿರುವ ಜಾಗಗಳಲ್ಲಿ, ರಸ್ತೆ ಬದಿಯ ಅಳತೆಗಳನ್ನು ಪಡೆದು ಇದನ್ನು ಡ್ರೋಣ್ ಆಧಾರಿತ ನಕ್ಷೆಯೊಂದಿಗೆ ಸಂಯೋಜಿಸಿ ಪ್ರತಿ ಆಸ್ತಿಯ ನಿಖರವಾದ ಸ್ಕೆಚ್ ಅನ್ನು ತಯಾರಿಸಲಾಗುತ್ತಿದೆ.<br>ಆಸ್ತಿಯ ನಕ್ಷೆ ಮತ್ತು ಮಾಲೀಕರ ವಿವರಗಳ ವಿಸ್ತೀರ್ಣ ಇತ್ಯಾದಿ ಮಾಹಿತಿ ಒಳಗೊಂಡ ಕರಡು ಪಿ.ಆರ್. ಕಾರ್ಡ್ ಅನ್ನು ನಾಗರೀಕರಿಗೆ ವಿತರಿಸಲಾಗುತ್ತಿದ್ದು, ಈ ಕುರಿತು ಸಾರ್ವಜನಿಕರ/ ಮಾಲಿಕರ ಆಕ್ಷೇಪಣೆಗಳನ್ನು ಪಡೆದು ನಿಯಮ 83 ರ ಮೂಲಕ ವಿಚಾರಣಾ ಪ್ರಕ್ರಿಯೆ ನಡೆಸಿ ವ್ಯತ್ಯಾಸವಿದ್ದಲ್ಲಿ ಸರಿಪಡಿಸಿ ಅಂತಿಮವಾಗಿ ಪಿ.ಆರ್ ಕಾರ್ಡ್ ಅನ್ನು ತಯಾರಿಸಲಾಗುತ್ತಿದೆ. |

**ಸಂಖ್ಯೆ: ಕಂಇ 205 ಎಸ್ಎಸ್ಸಿ 2022**

**(ಆರ್.ಅಶೋಕ)**
ಕಂದಾಯ ಸಚಿವರು